**<u>ದಿ : 31-10-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

**<u>ಮುಂದುವರಿದ ಮುಖ್ಯ ವಿಚಾರಣೆ</u>:- <u>ಅರ್ಜಿದಾರರ ಪರ ವಕೀಲರವರಿಂದ</u>**

1) ಅಪಘಾತಕ್ಕೆ ಸಂಬಂಧಿಸಿದ ಪ್ರಥಮ ವರ್ತಮಾನ / ದೂರು
2) ಅಪಘಾತಕ್ಕೆ ಸಂಬಂಧಿಸಿದಂತೆ ದಾಖಲು ಮಾಡಿರುವ ಪ್ರಥಮ ವರ್ತಮಾನ ವರದಿ
3) ಅಪಘಾತ ಸ್ಥಳದ ಸ್ಥಳ ಪಂಚನಾಮೆ
4) ಅಪಘಾತ ಸ್ಥಳದ ಕಚ್ಚಾ ನಕಾಶೆ
5) ನನ್ನ ಗಾಯದ ಪ್ರಮಾಣ ಪತ್ರ
6) ಮೋಟಾರು ವಾಹನ ತಪಾಸಣಾ ವರದಿ
7) ಅಪಘಾತಕ್ಕೆ ಸಂಬಂಧಿಸಿದ ಪೋಲೀಸರು ಸಲ್ಲಿಸಿದ ಮಾಹಿತಿ
8) ದೋಷಾರೋಪಣ ಪಟ್ಟಿಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದೇನೆ.
   ಸದರಿ ದಾಖಲೆಗಳನ್ನು ಕ್ರಮವಾಗಿ **ನಿ.ಪಿ - 1 ರಿಂದ 8** ಎಂದು ಗುರುತಿಸಲಾಯಿತು.
9) ಚಿಕಿತ್ಸೆಗಾಗಿ ಹಣವನ್ನು ಖರ್ಚು ಮಾಡಿದ ಬಗ್ಗೆ ಒಟ್ಟು **45 ಬಿಲ್ಲುಗಳು** ಮತ್ತು ರಶೀದಿಗಳು
10) ಚಿಕಿತ್ಸಾ ಪ್ರಮಾಣ ಪತ್ರ
11) ಅಂಗನ್ಯೂನ್ಯತಾ ಪ್ರಮಾಣ ಪತ್ರ ಹಾಜರು ಮಾಡಿದ್ದೇನೆ.
   ಸದರಿ ದಾಖಲೆಗಳನ್ನು ಕ್ರಮವಾಗಿ **ನಿ.ಪಿ - 9 ರಿಂದ 55** ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತೇನೆ.

**<u>ಮುಂದುವರಿದ ಮುಖ್ಯ ವಿಚಾರಣೆ :</u>** ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದುವರಿದ ಮುಖ್ಯ ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ**
**ಅಪಘಾತ ಪರಿಹಾರ ಮಂಡಳಿ, ಕುಂದಾಪುರ**